PH.D FINAL SYNOPSIS

NAME OF THE SCHOLAR.

Mr KUMARASWAMY B H

RESEARCH SCHOLAR IN SANSKRIT.
SRI DURGA CENTRE FOR PG STUDIES.
& RESEARCH IN SANSKRIT.KATEEL.
D K.Dist.UNIVERSITY OF MANGALORE
KARNATAKA.574148.

NAME OF THE GUIDE.

Dr. NAGARAJA B

PROFESSOR & GUIDE IN SANSKRIT
SRI DURGA CENTRE FOR PG STUDIES
& RESEARCH IN SANSKRIT.KATEEL.
D.K.Dist.UNIVERSITY OF MANGALORE.
KARNATAKA 574148.

SUBJECT: **ಸಂಸ್ಕೃತ**

TOPIC: **ಭಾಸನ ರೂಪಕಗಳಲ್ಲಿ ಮಾನವೀಯ ಮೌಲ್ಯಗಳು - ಒಂದು ಅಧ್ಯಯನ**

ಪಿಹೆಚ್. ಡಿ. ಪದವಿಗಾಗಿ ರಚಿಸಿರುವ ಮಹಾಪ್ರಬಂಧ ಸಲ್ಲಿಸಲು ಸಿದ್ಧಪಡಿಸಿದ ಅಂತಿಮ ಸಾರಲೇಖ

- ಅಧ್ಯಯನ ಕೇಂದ್ರ -
ಶ್ರೀ ದುರ್ಗಾ ಸಂಸ್ಕೃತ ಸ್ನಾತಕೋತ್ತರ ಹಾಗೂ ಸಂಶೋಧನಾ ಅಧ್ಯಯನ ಕೇಂದ್ರ,
ಕಟೀಲು - 574148, ದಕ್ಷಿಣ ಕನ್ನಡ ಜಿಲ್ಲೆ.
ಮಂಗಳೂರು ವಿಶ್ವವಿದ್ಯಾನಿಲಯ, ಕರ್ನಾಟಕ - 574148.

ಪರಿವಿಡಿ

ಕ್ರ.ಸಂ.	ವಿವರ	ಅಧ್ಯಾಯ	ಪುಟಸಂಖ್ಯೆ
1	1- ಪೀಠಿಕೆ 1.1 ಪ್ರಸ್ತಾವನೆ 1.2 ಸಂಸ್ಕೃತ ರೂಪಕಗಳು - ರೂಪಕದ ಅರ್ಥ ಸಂಸ್ಕೃತ ರೂಪಕ ಭೇದಗಳು ಮತ್ತು ಉಪ ರೂಪಕಗಳು - ಭರತನ ನಾಟ್ಯಶಾಸ್ತ್ರ -	ಅಧ್ಯಾಯ -1	2-3
2.	ಮಾನವೀಯ ಮೌಲ್ಯಗಳು - ಉದ್ದೇಶ, ವ್ಯಾಪ್ತಿ 2.1 ಭಾರತೀಯ ಸಂಸ್ಕೃತಿ - ಮೌಲ್ಯಗಳ ಅರ್ಥ ಮತ್ತು ಮಹತ್ವ - 2.2 ಮಾನವೀಯ ಮೌಲ್ಯಗಳು	ಅಧ್ಯಾಯ 2	4-5
3.	ಭಾಸ ಕವಿ ಹಾಗೂ ಕವಿ ಪ್ರಶಂಸೆ, ರೂಪಕಗಳ ಶೋಧನೆ - ಭಾಸನ ರೂಪಕಗಳು 3.1 ಭಾಸನ ರೂಪಕಗಳಲ್ಲಿ ಮಾನವೀಯ ಮೌಲ್ಯಗಳು ಮಹಾಭಾರತ ಆಧಾರಿತ (ಏಕಾಂಕ ನಾಟಕಗಳು) 3.2 ದೂತ ಘಟೋತ್ಕಚ 3.3 ಕರ್ಣಭಾರಂ 3.4 ದೂತವಾಕ್ಯಂ 3.5 ಮಧ್ಯಮ ವ್ಯಾಯೋಗ 3.6 ಊರುಭಂಗಮ್ 3.7 ಪಂಚರಾತ್ರಂ	ಅಧ್ಯಾಯ 3	5-7
4.	ರಾಮಾಯಣದ ಆಧಾರ 4.1 ಅಭಿಷೇಕ ನಾಟಕಂ 4.2 ಪ್ರತಿಮಾ ನಾಟಕಂ 4.3 ಯಜ್ಞ ಫಲಂ	ಅಧ್ಯಾಯ 4	7
5	ಬೃಹತ್ಕಥೆಯ ಆಧಾರ 5.1 ಸ್ವಪ್ನ ವಾಸವ ದತ್ತ 5.2 ಪ್ರತಿಜ್ಞಾಯೌಗಂಧರಾಯಣಮ್	ಅಧ್ಯಾಯ - 5	7
6	ಕಥಾಸಾಹಿತ್ಯ ಆಧಾರ - 6.1 ಚಾರುದತ್ತ ಅಥವಾ ದರಿದ್ರ ಚಾರುದತ್ತ 6.2 ಅವಿಮಾರಕ	ಅಧ್ಯಾಯ - 6	8
7	ಭಾಗವತ ಆಧಾರ 7.1 ಬಾಲಚರಿತಮ್	ಅಧ್ಯಾಯ -7	8
8.	ಉಪಸಂಹಾರ	ಅಧ್ಯಾಯ - 8	8-9
9.	ಆಧಾರ ಗ್ರಂಥಗಳು		

1 ಪೀಠಿಕೆ

ಸಂಸ್ಕೃತ ಸಾಹಿತ್ಯ

ಸಂಸ್ಕೃತ ಭಾಷೆಯು ಅತ್ಯಂತ ವಿಕಸನ ಹೊಂದಿದ ಭಾಷೆಯಾಗಿದ್ದು **विश्वभाषा जननी** ಎಂಬ ಗೌರವಕ್ಕೆ ಪಾತ್ರವಾಗಿದೆ. ವಿಶ್ವದಲ್ಲಿ ಭಾರತೀಯ ವೇದಗಳೇ ಅತ್ಯಂತ ಪ್ರಾಚೀನ ಸಾಹಿತ್ಯವೆಂದು ನಂಬಲಾಗಿದೆ. ಸಂಸ್ಕೃತ ಸಾಹಿತ್ಯದಲ್ಲಿ ಭಾರತೀಯ ಸಂಸ್ಕೃತಿಯು ನಾನಾ ರೂಪಗಳಲ್ಲಿ ವಿಕಾಸವಾಗಿದೆ.

ಭಾರತದ ಸಕಲ ಕಾವ್ಯೇತಿಹಾಸಾದಿ ಪರಂಪರೆಗಳಿಗೂ ಧರ್ಮಾದಿ ಚತುರ್ವಿಧ ಪುರುಷಾರ್ಥಗಳ ವಿಚಾರಗಳಿಗೂ ನಾಟ್ಯ, ಆಯುರ್ವೇದ ಮುಂತಾದ ನಾನಾ ವಿದ್ಯೆಗಳಿಗೂ ಮೂಲ ಉಗಮ ಸ್ಥಾನವೇ ವೇದವೆಂಬ ವಾಙ್ಮಯ ಜ್ಞಾನರಾಶಿ. ವೇದ ಶಬ್ದವು ವಿಧಜ್ಞಾನ ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ.

[1] **कवेः कर्म काव्यम्** । ಕವಿಯು ರಚಿಸಿದುದು ಕಾವ್ಯ ಇಂತಹ ರಚನೆ ಶ್ರವ್ಯವಾಗಿರಬಹುದು. ದೃಶ್ಯವಾಗಿಯೂ ಇರಬಹುದು. ದೃಶ್ಯ ಕಾವ್ಯವು ನಾಟಕಾದಿ ರೂಪಗಳು. ಸಾಹಿತ್ಯ ವಿಮರ್ಶೆಯನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಒಂದು ಸಂಶೋಧನಾತ್ಮಕ, ಎರಡು ವಿವರಣಾತ್ಮಕ, ಮೂರು ದರ್ಶನಾತ್ಮಕ.

1.1 ಪ್ರಸ್ತಾವನೆ

ಭಾಷೆಯು ಮಾನವ ಜೀವನದ ಅತಿ ಮುಖ್ಯ ಪ್ರಕರಣ ಕವಿ ದಂಡಿ ಹೇಳುವಂತೆ [2] **वाचामेव प्रसादेन लोकयात्रा प्रवर्तते** । ಭಾಷೆಯಿಲ್ಲದೆ ಭಾವಾಭಿವ್ಯಕ್ತಿಯಾಗದು. ಸಂಸ್ಕೃತವು ಭಾರತೀಯ ಸಂಸ್ಕೃತಿಯಲ್ಲಿ ಮಿಳಿತಗೊಂಡಿದೆ. ದೃಶ್ಯ ಕಾವ್ಯವು ನಾಟಕಾದಿ ರೂಪಗಳು ನಾಟಕ ಸಾಹಿತ್ಯ ನಾಟಕಗಳ ಉದಯಕ್ಕೆ ಮೊದಲು ಚತುರ್ವೇದಗಳು ಅವುಗಳು ಒಂದೊಂದು ಅಂಶ ನಾಟಕಗಳ ಉದಯಕ್ಕೆ ಕೂಡಿಕೊಂಡಿತು ಎಂಬುದು ಸಾಮಾನ್ಯ ತಿಳುವಳಿಕೆ. ಋಗ್ವೇದದಿಂದ ಪಾಠ್ಯ, ಯಜುರ್ವೇದದಿಂದ ಅಭಿನಯವನ್ನು ಸಾಮವೇದದಿಂದ ಗಾನವನ್ನು, ಅಥರ್ವಣ ವೇದದಿಂದ ರಸಗಳನ್ನು ತೆಗೆದುಕೂಡಿಸಿ ಬ್ರಹ್ಮನು ನಾಟ್ಯ ಸೃಷ್ಟಿಸಿದನಂತೆ.

ಸಂಸ್ಕೃತ ನಾಟಕ ಪೂರ್ವ ರೂಪ ವೇದಗಳ ಕಾಲದಲ್ಲಿಯೇ ಇತ್ತು. ಋಗ್ವೇದದ ಸಂವಾದ ಸೂಕ್ತ (ಸರಮಾ - ಫಣಿ ಯಮ- ಯಮಿ, ಪುರೂರವ ಊರ್ವಶಿ) ನದೀ ಮೂಲದಂತೆ ಸಂಸ್ಕೃತ ನಾಟಕ ವಾಹಿನಿಯ ಮೂಲವಾದರೂ ಬರುಬರುತ್ತಾ ಅಶ್ವಘೋಷ, ಭಾಸರ ವೇಳೆಗೆ ಪಾತ್ರ ವಿಸ್ತಾರ ಪಡೆದು ಪ್ರಪಂಚದ ಮತ್ತಾವ ನಾಟಕ ಪರಂಪರೆಯಲ್ಲೂ ಕಾಣಸಿಗದಷ್ಟು ಭೇದ-ಪ್ರಭೇದಗಳನ್ನು (ರೂಪಕಗಳು, ಉಪರೂಪಕ ಇನ್ನೂ ಹೆಚ್ಚು) ಪಡೆದು ಸಮೃದ್ಧವಾಯಿತು.

ಕವಿಕುಲ ಗುರು ಕಾಳಿದಾಸನು ನಾಟಕ (ರೂಪಕ ಇನ್ನೂ ಹೆಚ್ಚು) ರಚನೆಗೆ ಕೈ ಹಾಕುವ ಮೊದಲು ತನ್ನ ಕಾಲದ ಪ್ರಖ್ಯಾತರಾಗಿದ್ದ ಪ್ರಾಚೀನ ಕವಿಗಳನ್ನು ಗೌರವ ಪೂರ್ವಕವಾಗಿ ಸ್ಮರಿಸಿದ್ದಾನೆ. ಅವನ ಅಷ್ಟರ ಮಟ್ಟಿಗೆ ಗೌರವಿಸಿರುವ ಕವಿಗಳಲ್ಲಿ ಭಾಸನೇ ಮೊದಲನೆಯವನು ಎಂದು ತಿಳಿಯಬಹುದು.

ಕಾಳಿದಾಸನ ನಂತರದ ಕವಿಗಳಾದ ಬಾಣ, ದಂಡಿ, ರಾಜಶೇಖರ ಮುಂತಾದ ಇತರ ಕವಿಗಳೂ, ಭಾಮಹ ಮೊದಲಾದ ಲಾಕ್ಷಣಿಕರೂ ಭಾಸನನ್ನು ಶ್ಲಾಘಿಸಿ, ಅವನ ಗ್ರಂಥಗಳನ್ನು ಹೊಗಳಿ ವಿಮರ್ಶೆ ಮಾಡಿ ಬರೆದಿದ್ದಾರೆ.

ಅಂತಹ ಸಂಸ್ಕೃತ ಸಾಹಿತ್ಯದ ಶ್ರೇಷ್ಠ ಕವಿ ಭಾಸನು ಅತ್ಯುತ್ತಮ ನಾಟಕಕಾರ ಎಂಬ ವಿಚಾರದಲ್ಲಿ ಎರಡು ಮಾತಿಲ್ಲವೆಂದು ನಂಬಬಹುದು.

ನಾನು ಭಾಸ ಮಹಾಕವಿಯು ರಚಿಸಿರುವ ರೂಪಕಗಳನ್ನು ಅಧ್ಯಯನ ಮಾಡಿ, ವಿಶ್ಲೇಷಣೆ ಮಾಡಲು ನಿಶ್ಚಯಿಸಿರುತ್ತೇನೆ. ನನ್ನ ಮಹಾ ಪ್ರಬಂಧ ರಚನೆಗೆ ಭಾಸ ಮಹಾಕವಿಯ ರೂಪಕಗಳನ್ನು ಆಯ್ಕೆಮಾಡಿ ಕೊಂಡಿದ್ದೇನೆ.

[1] ಕುಂತಕ - ವಕ್ರೋಕ್ತಿ ಜೀವಿತ - ಶ್ಲೋಕ 2 ವೃತ್ತಿ

[2] ದಂಡಿ - ದಶ ರೂಪಕ 2ನೇ ಪರಿಚ್ಛೇದ

ನಾನು ಡಿಗ್ರಿ ತರಗತಿಗಳಲ್ಲಿ ಓದುತ್ತಿದ್ದಾಗ ಸಂಸ್ಕೃತ ನನ್ನ ಪ್ರಥಮ ಭಾಷೆಯಾಗಿತ್ತು. ಆಗ ಭಾಸನ **ಊರುಭಂಗಮ** ನಾಟಕವನ್ನು ಸಂಸ್ಕೃತ ಅಧ್ಯಯನ ವಿಷಯವನ್ನಾಗಿ ಗೊತ್ತುಪಡಿಸಿದ್ದರು. ಈ ರೂಪಕದಲ್ಲಿ ಬರುವ ಕೆಲವು ಸಂಭಾಷಣೆಗಳು ನನ್ನ ಮನಸ್ಸಿನಲ್ಲಿ ಉಳಿದಿದ್ದವು. ಭಾಸನ ರಚನಾ ಕೌಶಲ್ಯವು ನನಗೆ ಆನಂದವನ್ನುಂಟು ಮಾಡಿತ್ತು. ಕೆಲವು ಸಂಭಾಷಣೆಗಳಂತೂ ಒಳ್ಳೆಯ ಮಾನವೀಯ ಮೌಲ್ಯಗಳನ್ನೊಳಗೊಂಡಿರುವಂತಿತ್ತು. ಪಶ್ಚಾತ್ತಾಪ, ಕ್ಷಮೆ, ಗೌರವ - ಮುಂತಾದ ಕೆಲವು ಮಾನವೀಯತೆಯ ಮೌಲ್ಯಗಳ ಅರಿವು ಅದರಲ್ಲಿತ್ತು.

ಈಗಿನ ಸಮಾಜಕ್ಕೆ ಹಾಗೂ ಜನ ಸಮೂಹಕ್ಕೆ ಭಾಸನು ಪ್ರತಿಪಾದಿಸಿರುವ ಮೌಲ್ಯಗಳ ಪ್ರಚಾರದ ಅಗತ್ಯವಿದೆ ಎಂದು ನನಗನಿಸಿತು. ಆದ್ದರಿಂದಲೇ ಅವನ ರೂಪಕಗಳಲ್ಲಿರುವ ಮಾನವೀಯ ಮೌಲ್ಯಗಳನ್ನು ಗುರ್ತಿಸಿ, ಅದರ ಅಧ್ಯಯನ ನಡೆಸಲು ಇದು ಒಂದು ನನ್ನ ಪ್ರಯತ್ನವಾಗಿದೆ.

1.2 ಸಂಸ್ಕೃತ ರೂಪಕಗಳು (ದೃಶ್ಯ ಸಾಹಿತ್ಯ)

1 ರೂಪಕಗಳ ಉದಯಕ್ಕೆ ಮೊದಲು ಚತುರ್ವೇದಗಳಿದ್ದು, ಅವುಗಳ ಒಂದೊಂದು ಅಂಶ ನಾಟಕದಲ್ಲಿ ಕೂಡಿಕೊಂಡಿತು ಎಂಬುದು ಸಾಮಾನ್ಯ ತಿಳುವಳಿಕೆ ಈ ಬಗ್ಗೆ ಒಂದು ಕಥೆಯಿದೆ. ಕಾಮಕ್ರೋಧಾದಿಗಳು ಹೆಚ್ಚಿ, ಉಂಟಾದ ದುಃಖದ ಪೀಡೆಯನ್ನು ಮರೆಯಲು ಏನಾದರೂ ಉಪಾಯವುಂಟೇ ಎಂದು ಹುಡುಕುತ್ತಾ ಹೊರಟ ಇಂದ್ರಾದಿಗಳು ಬ್ರಹ್ಮನ ಬಳಿಗೆ ಬಂದು, ದೃಶ್ಯವೂ-ಶ್ರವ್ಯವೂ ಆಗಿ ಸರ್ವರಿಗೂ ರಂಜಕವಾಗುವಂತಹ ಒಂದು ಕ್ರೀಡನಕ ನೀಡು ಎಂದು ಬೇಡಿಕೊಂಡರಂತೆ. ಆತ ಋಗ್ವೇದದಿಂದ ಪಾಠ್ಯವನ್ನೂ, ಯಜುರ್ವೇದದಿಂದ ಅಭಿನಯವನ್ನು, ಸಾಮವೇದದಿಂದ ಗಾನವನ್ನೂ, ಅಥರ್ವಣವೇದದಿಂದ ರಸಗಳನ್ನು ತೆಗೆದು ಕೂಡಿಸಿ ನಾಟ್ಯವನ್ನು ಸೃಷ್ಟಿಸಿದನಂತೆ. ಮುಂದೆ ಭರತನು ತನ್ನ ಪುತ್ರರನ್ನೂ, ಅಪ್ಸರೆಯರನ್ನು ನಟ ನಟಿಯರಾಗಿ ಮಾಡಿ, ಇಂದ್ರಧ್ವಜದ ಉತ್ಸವದಲ್ಲಿ ಅಮೃತಮಂಥನವೇ ಮೊದಲಾದ ನಾಟಕಗಳನ್ನು ಆಡಿಸಿದನಂತೆ. ಪ್ರೇಕ್ಷಕರಾಗಿದ್ದವರು ದೇವ-ದಾನವರು.

ಸಂಸ್ಕೃತ ರೂಪಕ ಭೇದಗಳು

ಸಂಸ್ಕೃತ ಕಾವ್ಯಗಳಲ್ಲಿ ಶ್ರವ್ಯ, ದೃಶ್ಯ ಎಂಬ ಎರಡು ಭೇದಗಳಿವೆ. 'ಶ್ರವ್ಯ ಭೇದದಲ್ಲಿ ಪದ್ಯ, ಗದ್ಯ, ಚಂಪೂ ಎಂಬವರ್ಗಗಳೂ, ದೃಶ್ಯದಲ್ಲಿ ರೂಪಕ ಮತ್ತು ಉಪರೂಪಕ ಎಂಬ ಎರಡು ಒಳವಿಭಾಗಗಳೂ ಇದೆ.

नाटकम् सप्रकरणम् भाणः प्रहसनं डिमः ।

व्यायोगसमवकारौ वीथ्यमृकेहामृगा इति ।।

2 ರೂಪಕಗಳು ಹತ್ತು ವಿಧ :-1) ನಾಟಕ 2) ಪ್ರಕರಣ 3) ಭಾಣ 4) ಪ್ರಹಸನ 5) ಡಿಮ 6) ವ್ಯಾಯೋಗ 7) ಸಮವಕಾರ 8) ವೀಥಿ 9) ಅಂಕ 10) ಈಹಾಮೃಗ.

1 ಸಂಸ್ಕೃತ ನಾಟಕದ ಪೂರ್ವ ರೂಪ ವೇದಕಾಲದಲ್ಲಿಯೇ ಇತ್ತು. ಋಗ್ವೇದ ಸಂವಾದ ಸೂಕ್ತಗಳು (ಸರಮಾ-ಪಣಿ) , (ಯಮ-ಯಮಿ), (ಪುರೂರವ-ಊರ್ವಶೀ) ದೇವತೆಗಳ ಆರಾಧನೆಯ ಕಾಲದಲ್ಲಿ ಪಾತ್ರಧಾರಿಗಳಾದ ಋತ್ವಿಕ್ಕುಗಳಿಂದ ಪ್ರೇಕ್ಷಕರ ಮುಂದೆ ಅಭಿನಯಿಸಲ್ಪಡುತ್ತಿದ್ದಿರಬಹುದು. ಸಾಮಗಾನದ ಉಲ್ಲೇಖವಿರುವಂತೆ ಅಥರ್ವಣವೇದದಲ್ಲಿ ಸ್ತ್ರೀಯರ ದರ್ಶನವೂ ಉಕ್ತವಾಗಿದೆ.

ನಾಟ್ಯ ಶಾಸ್ತ್ರ ಕರ್ತೃವಾದ ಭರತ (1 ನೇಯ ಶತಮಾನ) ಒಬ್ಬಮುನಿ. ಬ್ರಹ್ಮನಿಂದ ಈ ನಾಟ್ಯವೇದವನ್ನು ಪಡೆದು ಅನುಗ್ರಹಿಸಿದನೆಂದು ಊಹಿಸುವವರೂ ಇದ್ದಾರೆ. ಆದರೂ ಭರತನ ನಾಟ್ಯ ಶಾಸ್ತ್ರವು ಈ ದಿಕ್ಕಿನಲ್ಲಿ ಮೊಟ್ಟಮೊದಲನೆಯ ಆಧಾರ ಗ್ರಂಥ, ಅಭಿನವಗುಪ್ತ ಇದಕ್ಕೆ 'ಅಭಿನವಭಾರತೀ' ಎಂಬ ವ್ಯಾಖ್ಯಾನವನ್ನು ಬರೆದಿದ್ದಾನೆ. ಭರತನ ನಾಟ್ಯಶಾಸ್ತ್ರವು ಭಾರತೀಯ ಸೌಂದರ್ಯ ಶಾಸ್ತ್ರದ ವಿಶ್ವಕೋಶದಂತಿದೆ. ನಾಟ್ಯಕ್ಕೆ ಹೆಚ್ಚು ಪ್ರಾಮುಖ್ಯ ಕೊಡಲಾಗಿದೆ. ಶೃಂಗಾರ, ವೀರ, ಕರುಣ, ಅದ್ಭುತ, ಹಾಸ್ಯ, ಭಯಾನಕ, ಭೀಭತ್ಸ, ರೌದ್ರ ಈ ಎಂಟು ರಸಗಳು ಅವುಗಳ ವಿಭಾವ ಅನುಭವಗಳು.1

ಋಗ್ವೇದದಿಂದ ಮಂತ್ರಭಾಗವನ್ನು, ಯಜುರ್ವೇದದಿಂದ ಅಭಿನಯವನ್ನು, ಸಾಮವೇದದಿಂದ ಗಾನವನ್ನು, ಅಥರ್ವವೇದದಿಂದ ರಸವನ್ನು ಆರಿಸಿಕೊಂಡು ಈ ನಾಟ್ಯಶಾಸ್ತ್ರವೆಂಬ ಪಂಚಮ ವೇದವನ್ನು ರಚಿಸಿದ ಬ್ರಹ್ಮ ಭರತನಿಗೆ ಉಪದೇಶಿಸಿದ. ಆತ ತನ್ನ ನೂರು ಮಂದಿ ಮಕ್ಕಳಿಗೂ ಇದನ್ನು ಕಲಿಸಿದ , ಪೂರ್ವರಂಗ (ನಾಟ್ಯರಂಗ ಸಜ್ಜಿಕೆ, ನಾಟ್ಯಮಾಚನ) , ರಸ, ಭಾವ. ಅಭಿನಯ, ಧರ್ಮಿ, ಪ್ರವೃತ್ತಿ, ಸಿದ್ಧಿ. ಸ್ವರ. ವಾದ್ಯ, ಗಾನ, ದಶರೂಪಕ, ಛಂದಸ್ಸು ಇತ್ಯಾದಿ ಇವು ರೂಪಕದ ಪ್ರಭೇದಗಳು.

'ರೂಪಕ' ಎಂದರೇನು ?

'**रूपकम् तत्समारोपात्**' ನಟರು ಅವಸ್ಥೆಯ ಅನುಕರಣದ ರೂಪವನ್ನು ತಮ್ಮಲ್ಲಿ ಸಂಪೂರ್ಣ ಆರೋಪಿಸಿಕೊಳ್ಳುವುದರಿಂದ 'ರೂಪಕ' ಎಂಬ ಹೆಸರು ಬಂದಿದೆ.

1 ಧನಂಜಯನ ದಶ ರೂಪಕಗಳು - 1 ನೇ ಪ್ರಕಾಶ

ಅಧ್ಯಾಯ - 2

2.1 ಮಾನವೀಯ ಮೌಲ್ಯಗಳು - ಉದ್ದೇಶ ಮತ್ತು ವ್ಯಾಪ್ತಿ

[1]ಭಾರತೀಯ ಸಂಸ್ಕೃತಿಯಲ್ಲಿ ಮೌಲ್ಯಗಳಿಗೆ ಪ್ರಾಧಾನ್ಯತೆಯಿದೆ. ವೇದಗಳಲ್ಲಿ ಮೌಲ್ಯಗಳ ಪ್ರತಿಪಾದನೆಯಿದೆ. 'ವೇದ' ಎಂದರೆ ಜ್ಞಾನ ಭಂಡಾರ. ಇಂತಹ ಜ್ಞಾನ ಭಂಡಾರದ ಉತ್ತುಂಗ ಶಿಖರಗಳೇ ಉಪನಿಷತ್ತುಗಳು. ಆದ್ದರಿಂದಲೇ ಉಪನಿಷತ್ತುಗಳು ವೇದಾಂತ ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆದಿವೆ.

ಮೌಲ್ಯಗಳು ಜೀವನಕ್ಕೆ ಬೇಕಾದ ಮಮಕಾರವಿಲ್ಲದ ಅಂಶಗಳು. ನೂರು ಮೌಲ್ಯಗಳನ್ನು ವಿವರಿಸುವುದಕ್ಕಿಂತ ಒಂದು ಮೌಲ್ಯವನ್ನು ಆಚರಣೆಯಲ್ಲಿ ತರುವುದು ಲೇಸೆಂದು ನಮ್ಮ ರಾಷ್ಟ್ರದ ಮಾಜಿ ರಾಷ್ಟ್ರಪತಿಗಳಾದ ಡಾ. ಎಸ್. ರಾಧಾಕೃಷ್ಣನ್ ಅಭಿಪ್ರಾಯಪಡುತ್ತಾರೆ.

'ಮೌಲ್ಯ'ವೆಂದರೆ ಬೆಲೆಯುಳ್ಳದ್ದು ಎಂದರ್ಥ. ಮನುಷ್ಯನು ತನ್ನ ಜೀವನದಲ್ಲಿ ಅತ್ಯಂತ ಮಹತ್ವವನ್ನು ಯಾವುದಕ್ಕೆ ಕೊಡುತ್ತಾನೆಯೋ ಅದು ಅವನ ಮೌಲ್ಯವಾಗುತ್ತದೆ. ಇಂದ್ರಿಯಸುಖ ಲೋಲುಪನಿಗೆ ಸುಖ ನೀಡುವ ಸಾಮಗ್ರಿಗಳೇ ಮಹತ್ವದ್ದಾಗಿರುವುದರಿಂದ ಅವು ಅವನ ಮೌಲ್ಯವಾಗುತ್ತದೆ. ಪರೋಪಕಾರಿಯಾದವನಿಗೆ ಇತರರಿಗೆ ಸಹಾಯ ಮಾಡುವುದೇ ಅವನ ಜೀವನದ ಮೌಲ್ಯವಾಗಿ ಬಿಡುವುದು.

ಭಾರತೀಯರನ್ನು ದಾರಿದ್ರ್ಯದಿಂದ ಬಿಡುಗಡೆಗೊಳಿಸುವುದೇ ವಿವೇಕಾನಂದರ ಗುರಿಯಾಗಿದ್ದರೆ, ಗಾಂಧೀಜಿಯರಿಗೆ ಭಾರತೀಯರನ್ನು ಸ್ವತಂತ್ರಗೊಳಿಸುವುದೇ ಗುರಿಯಾಗಿತ್ತು. ಈ ದಿಸೆಯಲ್ಲಿ ಅವರು ತಮ್ಮ ತಮ್ಮ ಮೌಲ್ಯಗಳನ್ನು ಪ್ರದರ್ಶಿಸಿದ್ದರು. ಸಮಾಜದಲ್ಲಿ ಮೇಲುಕೀಳು, ತಾರತಮ್ಯವನ್ನು ಕಿತ್ತೊಗೆಯಬೇಕೆಂದು ಶ್ರೀ ಬಸವೇಶ್ವರರು ತಮ್ಮ ಗುರಿ ಎಂದು ಭಾವಿಸಿದ್ದರೆ, ಅಸ್ಪೃಶ್ಯತೆಯನ್ನು ನಾಶ ಮಾಡುವುದೇ ತಮ್ಮ ಜೀವನದ ಗುರಿ ಎಂದು ಡಾ. ಬಿ.ಆರ್. ಅಂಬೇಡ್ಕರ್‌ರವರು ಭಾವಿಸಿದ್ದರು. ಅವರು ತಮ್ಮ ಗುರಿಗಳನ್ನು ಸಹಕರಿಸುವ ಮೌಲ್ಯಗಳನ್ನು ಆಧರಿಸಿದ್ದರು.

ಅಹಿಂಸೆ, ಸತ್ಯ, ಶಾಂತಿ, ಪರೋಪಕಾರ, ತ್ಯಾಗ, ಕರುಣೆ, ಸಹಕಾರ, ಸಹಜೀವನ, ಗುರು-ಹಿರಿಯರನ್ನು ಗೌರವಿಸುವುದು, ರಾಷ್ಟ್ರನಿಷ್ಠೆ ಹಾಗೂ ರಾಷ್ಟ್ರಭಕ್ತಿ, ದಯೆ, ಸಹನೆ, ಮುಂತಾದವುಗಳನ್ನು ಮೌಲ್ಯಗಳೆಂದು ನಾವು ಸಾಮಾನ್ಯವಾಗಿ ಹೇಳುತ್ತೇವೆ.

2.2 ನಮ್ಮ ಪೂರ್ವಿಕರು ಹಾಗೂ ಪ್ರಾಚೀನ ಮಾನವನ ಸರ್ವತೋಮುಖ ವಿಕಾಸಕ್ಕಾಗಿ ನಾಲ್ಕು ಮೌಲ್ಯಗಳನ್ನು ಪ್ರಧಾನವಾಗಿ ಗುರ್ತಿಸಿದ್ದರು. ಅವುಗಳೆಂದರೆ, ಧರ್ಮ, ಅರ್ಥ, ಕಾಮ, ಮೋಕ್ಷಗಳು. ಅವುಗಳನ್ನು ಪುರುಷಾರ್ಥಗಳೆಂದು ಕರೆಯುತ್ತಿದ್ದರು. ಇವುಗಳಲ್ಲಿ ಮೋಕ್ಷವು ಪರಮ ಪುರುಷಾರ್ಥವಾಗಿದೆ. ಅದನ್ನು ಪಡೆಯಲು ಧರ್ಮಾದಿಗಳು ಸಾಧನವಾಗಿದೆ.

ಮೋಕ್ಷವು ಪುರುಷಾರ್ಥಗಳಲ್ಲಿ ಅತ್ಯಂತ ಶ್ರೇಷ್ಠವಾದುದು. ಅದು ಮೇಲ್ನೋಟಕ್ಕೆ ಅತ್ಯಂತ ವೈಯಕ್ತಿಕವೆಂದು ಕಂಡುಬಂದರೂ ಅಂತರಂಗದಲ್ಲಿ ವಿಶ್ವವ್ಯಾಪ್ತಿಯಾಗಿದೆ. ಮೋಕ್ಷ ಹೊಂದುವುದೇ ಪ್ರತಿಯೊಂದು ಜೀವಿಯ ಪರಮ ಗುರಿಯಾಗಿರುತ್ತದೆ. ಭಾರತದಲ್ಲಿ ಜನಿಸಿದ ಎಲ್ಲಾ ದಾರ್ಶನಿಕರೂ ಮೋಕ್ಷವನ್ನು ಅಂಗೀಕರಿಸಿದ್ದಾರೆ.

ಮೋಕ್ಷವನ್ನು ಬಿಡುಗಡೆ, ನಿರ್ವಾಣ, ಮುಕ್ತ, ಅಪವರ್ಗ, ಬ್ರಹ್ಮಸಾಕ್ಷಾತ್ಕಾರ ಎಂಬ ಪದಗಳಿಂದಲೂ ದಾರ್ಶನಿಕರು ವಿವರಿಸಿದ್ದಾರೆ. ಮೋಕ್ಷವನ್ನು ಹೊಂದಿದ ವ್ಯಕ್ತಿ ವಿಶ್ವಮಾನವನಾಗುವನು. ಇದನ್ನೇ

[1] **आत्मवत् सर्व भूतानि यः पश्यति सः पण्डितः** (ಆತ್ಮವತ್ ಸರ್ವಭೂತಾನಿ ಯಃ ಪಶ್ಯತಿ ಸಃ ಪಂಡಿತಃ) ಎಂಬ ವಾಕ್ಯ ತಿಳಿಸುವುದು. ಅವನ ದೃಷ್ಟಿ ಕೋನವು ಬದಲಾಗುವುದು. ಎಲ್ಲರನ್ನೂ ಸಮದೃಷ್ಟಿಯಿಂದ ನೋಡುವನು. ಈ ವಿಷಯವನ್ನೇ ಭಗವದ್ಗೀತೆಯಲ್ಲಿ

[1] **विद्याविनयसंपन्ने ब्राह्मणे गवि हस्तिनी । शुनिचैव श्वपाकेच पण्डिताः समदर्शिनः ॥**

(ವಿದ್ಯಾ ವಿನಯ ಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನೀ। ಶುನಿಚೈವ ಶ್ವಪಾಕೇಚ ಪಂಡಿತಾಃ ಸಮದರ್ಶಿನಃ) ಎಂದು

[1] ಮಹಾಭಾರತ - ಶಾಂತಿ ಪರ್ವ (109-11)

[2] ಭಗವದ್ಗೀತೆ - ಅಧ್ಯಾಯ - 5 ಶ್ಲೋಕ 18

ಹೇಳಲಾಗಿದೆ. ಅಂದರೆ ವಿದ್ಯೆ ವಿನಯಗಳಿಂದ ಕೂಡಿದ ಬ್ರಾಹ್ಮಣನು ಆಕಳು, ಆನೆ, ನಾಯಿ, ಚಾಂಡಾಲರೆಲ್ಲರನ್ನೂ ಪಂಡಿತನಾದವನು ಸಮಾನವಾಗಿ ಕಾಣುವನು. ಈ ಹಂತ ತಲುಪುವುದು ಸಾಮಾನ್ಯರಿಗೆ ಕಷ್ಟಸಾಧ್ಯ. ಈ ಹಂತದಲ್ಲಿ ಇರುವ ವ್ಯಕ್ತಿಗೆ ಶತ್ರು-ಮಿತ್ರ, ಲಾಭ-ಹಾನಿ, ಜಯ-ಅಪಜಯ, ಶೀತ-ಉಷ್ಣ ಮುಂತಾದ ದ್ವಂದ್ವಗಳಿರುವುದಿಲ್ಲ. ಚರಾಚರ ಜಗತ್ತಿನಲ್ಲಿರುವ ಪ್ರತಿಯೊಂದು ಜೀವಿಯೂ ತನ್ನದೇ ಒಂದು ಅಂಶವಾಗಿದೆ ಎಂದು ಭಾವಿಸುವುದು. ಆ ರೀತಿಯಾಗಿ ವ್ಯವಹರಿಸುವುದು ಮೋಕ್ಷದ ಪರಿಕಲ್ಪನೆಯಲ್ಲಿದೆ. ಆದ್ದರಿಂದ ಇದನ್ನು ಪರಮ ಪುರುಷಾರ್ಥ ಎಂದು ಕರೆದಿರುವರು. ಸಂಸ್ಕೃತದ ಅಧ್ಯಯನದಿಂದ ಈ ಮೌಲ್ಯದ ಅರಿವು ಉಂಟಾಗುವುದು. ಈ ಮೌಲ್ಯವನ್ನು ಉಪನಿಷತ್ತುಗಳು ನೇರವಾಗಿ ವಿವರಿಸಿದರೆ ಇತರ ಸಾಹಿತ್ಯವು ಪರೋಕ್ಷವಾಗಿ ವಿವರಿಸಿವೆ.

ಅಧ್ಯಾಯ - 3

ಭಾಸ ಮಹಾಕವಿ

ಭಾಸನು ಸಂಸ್ಕೃತ ಸಾಹಿತ್ಯದ ಪ್ರಸಿದ್ಧ ನಾಟಕಕಾರ. ಸಂಸ್ಕೃತ ಸಾಹಿತ್ಯವನ್ನು ತನ್ನ ನಾಟಕಗಳಿಂದ ಶ್ರೀಮಂತಗೊಳಿಸಿ, ಕಾಳಿದಾಸ, ಬಾಣ ಮುಂತಾದ ಮಹಾಕವಿಗಳಿಂದ ಗೌರವಗಳಿಸಿದ. ಭಾಸನ ಕಾಲ, ದೇಶ, ಕೃತಿಗಳ ಬಗ್ಗೆ ಅನೇಕ ಭಿನ್ನಾಭಿಪ್ರಾಯಗಳಿವೆ. ಅವನ ಜೀವಿತದ ಕಾಲದ ಚರ್ಚೆಯನ್ನು ಮೂರನೇ ಶತಮಾನದಿಂದ ನಾಲ್ಕನೇ ಶತಮಾನದ ತನಕ ಚಾಚಿಕೊಂಡಿದೆ.

ಭಾಸನು ವ್ಯಾಸ, ವಾಲ್ಮೀಕಿಗಳಿಗಿಂತ ಈಚಿನವನೆಂಬುದರಲ್ಲೂ, ಕಾಳಿದಾಸ, ಬಾಣರಿಗಿಂತ ಹಿಂದಿನನೆಂಬುದರಲ್ಲೂ ಸಂದೇಹವಿಲ್ಲ. ಆದರೆ ವ್ಯಾಸ, ವಾಲ್ಮೀಕಿ, ಕಾಳಿದಾಸ ಇವರಲ್ಲಿ ಯಾರೊಬ್ಬರ ಕಾಲವೂ ಖಚಿತವಾಗಿ ತಿಳಿದಿಲ್ಲ. ಬಾಣನ ಕಾಲ ಮಾತ್ರ ಆರನೆಯ ಶತಮಾನವೆಂಬುದರಲ್ಲಿ ವಿವಾದವಿಲ್ಲವಾದ್ದರಿಂದ ಬಾಸನು ಅದಕ್ಕೆ ಹಿಂದಿನವನೆಂಬುದು ಸ್ಪಷ್ಟ.

ಕಾಳಿದಾಸನು 4ನೇ ಶತಮಾನದವನೆಂದು ಒಪ್ಪುವುದಾದರೆ ಭಾಸ 2 ಅಥವಾ 3ನೇ ಶತಮಾನದವನಾಗಿರಬೇಕು. ಭಾಸನು ಉತ್ತರ ಭಾರತದವನೇ ದಕ್ಷಿಣ ಭಾರತದವನೇ ಎಂಬುದರಲ್ಲೂ ಸಂದೇಹವಿದೆ.

ಭಾಸ ಕವಿ ವಿರಚಿತವೆಂದು ನಮಗೆ ಪರಿಚಿತವಾಗಿದ್ದು ಸುಭಾಷಿತ ಗ್ರಂಥಗಳಲ್ಲಿ. ಹಂಚಿಹೋಗಿದ್ದ 13 ಬಿಡಿ ಶ್ಲೋಕಗಳು ಮಾತ್ರ. ಭಾಸನ ವಿಚಾರವಾಗಿ ಅವನಿಗಿಂತ ಈಚಿನ ಕವಿಗಳ ಕೆಲವು ಉಲ್ಲೇಖಗಳೂ ದೊರೆತಿದ್ದವು. ಸಂಸ್ಕೃತ ಸಾಹಿತ್ಯದ ಶ್ರೇಷ್ಠ ಕವಿ ಕಾಳಿದಾಸನು ತನ್ನ 'ಮಾಳವಿಕಾಗ್ನಿ ಮಿತ್ರ' ನಾಟಕದ ಪ್ರಸ್ತಾವನೆಯಲ್ಲಿ [1] **प्रथित यशसां भास सौमिल्ल कवि पुत्रादीनां प्रबन्धानतिक्रम्य कथं वर्तमानस्य कवेः कालिदासस्य कृतौ बहुमानः** । ಎಂದು ಭಾಸನು ತನಗಿಂತ ಹಿಂದಿನ ಪ್ರಸಿದ್ಧ ಕವಿಗಳಲ್ಲಿ ಒಬ್ಬನೆಂದು ಪರಿಗಣಿಸಿರುವುದನ್ನು ಗಮನಿಸಬಹುದು.

ಬಾಣನು ತನ್ನ ಹರ್ಷ ಚರಿತ ಪ್ರಸ್ತಾವನೆಯಲ್ಲಿ

[2] **सूत्रधारकृतारम्भैः नाटकैर्बहुभूमिकैः ।**
सपताकैर्यशोलेभे भासोदेवकुलैरिव ॥

ಎಂಬುದಾಗಿ ಭಾಸನನ್ನು ಪ್ರಶಂಸಿಸಿದ್ದಾನೆ.

ಸುಮಾರು 10 ನೇ ಶತಮಾನದ ಕವಿ ರಾಜಶೇಖರನು ತನ್ನ 'ಕಾವ್ಯಮೀಮಾಂಸೆ' ಯಲ್ಲಿ ಭಾಸ ಮತ್ತು ಅವನ ಕೃತಿಯಾದ 'ಸ್ವಪ್ನವಾಸವದತ್ತ' ಈ ಎರಡು ಹೆಸರುಗಳನ್ನು ಒಟ್ಟಿಗೆ ಪ್ರಯೋಗ ಮಾಡಿರುವ ಈ ಕೆಳಗಿನ ಶ್ಲೋಕವು ತುಂಬಾ ಸಹಾಯಕವಾಗುತ್ತದೆ.

[3] **भासनाटक चक्रेपि छेकैः क्षिप्ते परीक्षितुम् ।**
स्वप्नवासवदत्तस्य दाहको भून्न पावकः ॥

ಸಂಸ್ಕೃತ ಸಾಹಿತ್ಯದಲ್ಲಿ ಒಬ್ಬನೇ ಕವಿಯಿಂದ ರಚಿತವಾದ ನಾಟಕ ಚಕ್ರವೆಂದರೆ ಈ ಹದಿಮೂರು ನಾಟಕಗಳನ್ನು ಬಿಟ್ಟರೆ ಬೇರೆಯಿಲ್ಲ. ಅಂತಹ ನಾಟಕ ಚಕ್ರದಲ್ಲೇ ಸೇರಿರುವುದಾಗಿ ಹೇಳಿರುವ ಸ್ವಪ್ನವಾಸವದತ್ತವೂ ಈ ಹದಿಮೂರರಲ್ಲಿ ಒಂದು ಆದ್ದರಿಂದ ಅದರ ಕರ್ತೃ ಭಾಸನೇ ಎಂದು ತೀರ್ಮಾನಿಸಬಹುದು.

ಕ್ರಿ.ಶ. 1912 ರಲ್ಲಿ ತಿರುವಾಂಕೂರಿನ ಪಂಡಿತ ಗಣಪತಿ ಶಾಸ್ತ್ರಿಗಳು 'ಸ್ವಪ್ನವಾಸವದತ್ತಂ' ಎಂಬ ನಾಟಕವನ್ನು ಪ್ರಕಟಿಸಿ, ಅದರೊಡನೆ ದೊರೆತ ಇತರ ನಾಟಕಗಳೂ ಸೇರಿ ಒಟ್ಟು ಹದಿಮೂರು ನಾಟಕಗಳೂ ಭಾಸಕೃತವೆಂದು ಪ್ರತಿಪಾದಿಸುವವರೆಗೆ ಭಾಸನ ಹೆಸರು ಮಾತ್ರ ಅನಂತರ ಕಾಲಿಕ ಕವಿಗಳ ಪ್ರಶಂಸೆಯ ಮೂಲಕ ನಮಗೆ ತಿಳಿದಿತ್ತು. ಈ 'ಸ್ವಪ್ನವಾಸವದತ್ತಂ' ನಾಟಕವು

[1] ಕಾಳಿದಾಸ ಮಾಳವಿಕಾಗ್ನಿಮಿತ್ರ ರೂಪಕದ ಪ್ರಸ್ತಾವನೆಯಲ್ಲಿ.
[2] ಬಾಣ ಹರ್ಷಚರಿತ - ಪೀಠಿಕಾ ಶ್ಲೋಕ
[3] ರಾಜಶೇಖರ ಕಾವ್ಯ ಮೀಮಾಂಸೆ

ಶ್ರೀ ಗಣಪತಿ ಶಾಸ್ತ್ರಿಗಳು ಪ್ರಾಚೀನ ಗ್ರಂಥ ಸಂಗ್ರಹಕ್ಕಾಗಿ ಸಂಚರಿಸುತ್ತಿದ್ದಾಗ ಅವರಿಗೆ ದೊರೆತ 13 ನಾಟಕಗಳಲ್ಲಿ ಒಂದು. ಈ ನಾಟಕಗಳನ್ನು ಕೆಳಕಂಡಂತೆ ವಿಂಗಡಿಸಲಾಗಿದೆ.

1. ಬೃಹತ್ಕಥೆಯ ಆಧಾರದ ಮೇಲೆ ರಚಿತವಾದವು.
   1) ಪ್ರತಿಜ್ಞಾಯೌಗಂಧರಾಯಣ. 2) ಸ್ವಪ್ನವಾಸವದತ್ತಂ 3) ಅವಿಮಾರಕಂ
2. ರಾಮಾಯಣದ ಆಧಾರದ ಮೇಲೆ ರಚಿತವಾದವುಗಳು :
   4) ಪ್ರತಿಮಾನಾಟಕಂ 5) ಅಭಿಷೇಕ ನಾಟಕಂ 5ಅ) ಯಜ್ಞಫಲಂ
3. ಮಹಾಭಾರತದ ಆಧಾರದ ಮೇಲೆ ರಚಿತವಾದವುಗಳು :
   6) ಮಧ್ಯಮ ವ್ಯಾಯೋಗ 7) ಪಂಚರಾತ್ರಂ 8) ದೂತವಾಕ್ಯಂ
   9) ದೂತ ಘಟೋತ್ಕಚಂ 10) ಕರ್ಣ ಭಾರಂ 11) ಊರುಭಂಗಂ
4. ಕೃಷ್ಣ ಕಥೆಯ ಆಧಾರದ ಮೇಲೆ ರಚಿತವಾದವುಗಳು :
   12) ಬಾಲಚರಿತಂ 13) ಚಾರುದತ್ತಂ (ಸ್ವತಂತ್ರ ರೂಪಕ)

ಈ ನಾಟಕಗಳ ಕರ್ತೃ ಯಾರೆಂಬುದು ಅವುಗಳಲ್ಲೊಂದರಲ್ಲೂ ಉಕ್ತವಾಗಿರಲಿಲ್ಲವಾದ್ದರಿಂದ ಶ್ರೀ ಶಾಸ್ತ್ರಿಗಳು ಕೆಲವು ಕಾರಣಗಳನ್ನು ಮುಂದಿಟ್ಟು ಅವುಗಳೆಲ್ಲವೂ ಏಕ ಕರ್ತೃಗಳೆಂದೂ, ಆ ಕರ್ತೃವು ಕಾಳಿದಾಸನಿಗಿಂತ ಪ್ರಾಚೀನವಾಗಿ ಅವನ ಪ್ರಶಂಸೆಗೆ ಪಾತ್ರನಾಗಿದ್ದ ಭಾಸನೇ ಎಂದು ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದರು.

ಈ 13 ನಾಟಕಗಳು ಏಕ ಕರ್ತೃವಿನದು. ಈ ಎಲ್ಲಾ ನಾಟಕಗಳಲ್ಲೂ ಬಹುಮುಖ್ಯವಾದ ಸಾಮ್ಯಗಳು ಕಂಡುಬರುತ್ತದೆ.

नान्यंते ततः प्रविशति सूत्रधारः । ಎಂದು ಆರಂಭವಾಗುತ್ತದೆ. ಆ ಮೇಲೆ ಸೂತ್ರಧಾರನು ಪ್ರಾರ್ಥನಾ ಶ್ಲೋಕ (ನಾಂದೀ) ಹೇಳಿ ಪ್ರಸ್ತಾವನೆ ಆರಂಭಿಸುತ್ತಾನೆ. ಮೊದಲು ನಾಂದೀ ಶ್ಲೋಕವು ಆ ಮೇಲೆ ತತಃ ಪ್ರವಿಶತಿ ಸೂತ್ರಧಾರಃ ಎಂಬ ರಂಗ ಸೂಚನೆಯೂ ಬರುತ್ತದೆ. ಪ್ರಸ್ತಾವನೆಯಲ್ಲಿ ನಾಟಕದ ಹೆಸರು, ಕವಿ ಮತ್ತು ಅವನ ಆಶ್ರಯದಾತನ ಹೆಸರು ಇತ್ಯಾದಿಗಳನ್ನು ಹೇಳುವುದು ಸಂಪ್ರದಾಯ.

ಅಧ್ಯಾಯ - 3.1
ಭಾಸನ ರೂಪಕಗಳಲ್ಲಿ ಮಾನವೀಯ ಮೌಲ್ಯಗಳು
ಮಹಾಭಾರತ ಆಧಾರಿತ :-

3.2 ದೂತಘಟೋತ್ಕಚ :- ಏಕಾಂಕನಾಟಕ

ಈ ರೂಪಕದಲ್ಲಿ ಧೃತರಾಷ್ಟ್ರ ನ್ಯಾಯದ ಪರ – ಅಭಿಮನ್ಯುವಿನ ಮರಣದ ವಾರ್ತೆ ಕೇಳಿ–ಮರುಕ ಒಬಬ ಹಸುಗೂಸನ್ನು (ಅಭಿಮನ್ಯು) ಹೊಡೆಯಲು ಕೈ ಎತ್ತಿದಾಗ ಆ ನಿರ್ದಯಿಗಳ ತೋಳುಗಳೇಕೆ ಕೆಳಗೆ ಬಿದ್ದು ಹೋಗಲಿಲ್ಲ? ಎನ್ನುತ್ತಾನೆ. ಇದೊಂದು ಮಾನವೀಯತೆಯ ಕರುಣಾ ಪೂರಿತ ಘಟನೆ ಘಟೋತ್ಕಚನ ಸೋದರ ಪ್ರೇಮ–ಪಾಂಡವರ ಬಗ್ಗೆ ಗೌರವ. ಗುರುಹಿರಿಯರನ್ನು ಗೌರವಿಸುವುದು.

ಅಧ್ಯಾಯ 3- 3.3

ಕರ್ಣಭಾರ :-

ಕರ್ಣನ ದಾನ ಬುದ್ಧಿ ಮತ್ತು ಹೃದಯವಂತಿಕೆ, ಇಂದ್ರನ ಕುಟಿಲತೆ ದಾನವೀರ–ತ್ಯಾಗಿ ಕರ್ಣ ಕರ್ಣನಿಂದ ಪ್ರತಿಫಲ ನಿರಾಕರಣೆ .

ಅಧ್ಯಾಯ 3 3.4

ದೂತವಾಕ್ಯ :-

ವಾಸುದೇವನ ವೈಭವ, ದುರ್ಯೋಧನ ಮತ್ತು ದುಷ್ಟಕೂಟದ ವೈರತ್ವ ಪರಮಾತ್ಮನವಿನೀತ ಸ್ವಭಾವ- ಯುದ್ಧದ ಬದಲು ಸಂಧಿ ಬಯಕೆ –ಶಾಂತಿಗಾಗಿ ಪ್ರಯತ್ನ, ಸುಯೋಧನನ ನಿರಾಕರಣೆ.

ಅಧ್ಯಾಯ 3 - 3.5

ಮಧ್ಯಮ ವ್ಯಾಯೋಗ :-

ಭೀಮನು ಶಕ್ತಿವಂತ, ದಯಾಳು– ಆರ್ತ ರಕ್ಷಣೆ– ಬಲಹೀನ ಸಜ್ಜನರ, ರಕ್ಷಣೆ, ದುಷ್ಟಶಿಕ್ಷೆ- ಕ್ಷಾತ್ರ ಧರ್ಮಪಾಲನೆ.

ಅಧ್ಯಾಯ 3 - 3.6 ಊರು ಭಂಗಂ :

ಏಕಾಂಕದ ರುದ್ರನಾಟಕ, ಭೀಭತ್ಸ, ರೌದ್ರ, ಕರುಣ ರಸಗಳ ಸಮ್ಮಿಲನ **अहो खलुवैरम् पश्चात्तापः संवृत्तः ।**

ಎಂದು ಬಲದೇವನ ಉದ್ಗಾರ ವೈರವು ಪಶ್ಚಾತ್ತಾಪದಲ್ಲಿ ಕೊನೆ ದುರ್ಯೋಧನನ ಒಳ್ಳೆಯ ನಡವಳಿಕೆ, ತನ್ನ ಮಗನಿಗೆ ಯುಧಿಷ್ಠಿರನ ಮಾತು ಕೇಳಲು ಸಲಹೆ.

ಅಧ್ಯಾಯ 3 - 3.7

ಪಂಚರಾತ್ರಮ್ :-

ಉತ್ತರ ಗೋಗ್ರಹಣ, ಐದು ರಾತ್ರಿಗಳೊಳಗೆ ಪಾಂಡವರ ವೃತ್ತಾಂತ – ಭೀಷ್ಮರ ಪ್ರೇರಣೆ- ದ್ರೋಣರ ಒಪ್ಪಿಗೆ, ಗೋಗ್ರಹಣ ಕೌರವರಿಂದ ಕೀಚಕವಧೆ-ದುಷ್ಟ ಶಿಕ್ಷೆ, ಅರ್ಜುನನ ಪೌರುಷ , ಕರ್ಣ ಧರ್ಮ ಪಕ್ಷಪಾತಿ ಅರ್ಜುನನ ಧೀರೋದಾತ್ತ ಗುಣ ಪ್ರಕಟಣೆ.

ಅಧ್ಯಾಯ 4

ರಾಮಾಯಣದ ಆಧಾರ

ಅಧ್ಯಾಯ 4 4.1 ಅಭಿಷೇಕ ನಾಟಕಮ್:-

ಈ ರೂಪಕದ ನಾಯಕ ಶ್ರೀರಾಮ ವಾಲಿಯ ವಾಕ್ಪಟುತ್ವ, ದುರಂತ ನಾಯಕ ಜನರ ಅನುಕಂಪಕ್ಕೆ ಬಾಧ್ಯ. ಸೀತೆಯ ಪಾತಿವ್ರತ್ಯಪ್ರತಿಪಾದನೆ ಮರ್ಯಾದಾ ಪುರುಷೋತ್ತಮ ಶ್ರೀರಾಮ ದುರ್ಜನರಿಗೆ ಶಿಕ್ಷೆ -ಸುಗ್ರೀವ, ರಾಮನ- ಸಹೃದಯ ಸ್ನೇಹಿತನಂತೆ ಚಿತ್ರಣ. ರಾವಣ ದುರಾಚಾರಿ ಲಂಪಟ ಇದಕ್ಕೆ ವ್ಯತಿರಿಕ್ತ ವಿಭೀಷಣ. ರಾಕ್ಷಸಕುಲದ ರಕ್ಷಕನಂತೆ ಭಾಸನಿಂದ ಚಿತ್ರಣ ಧರ್ಮಕ್ಕೇಜಯ , ಶ್ರೀರಾಮ- ವಿಭೀಷಣ- ಸುಗ್ರೀವನ ಅಭಿಷೇಕ.

ಅಧ್ಯಾಯ 4 4.2

ಪ್ರತಿಮಾನಾಟಕಮ್ :-

ರಾಮಾಯಣದ ಕಥೆಯೇ ಮೂಲಾಧಾರ ರಾಮನ ಆದರ್ಶ ಪಿತೃವಾಕ್ಯ ಪರಿಪಾಲಕ, ಮಿಥಿಲಾನಗರಕ್ಕೆ ಭೇಟಿ ರಾಮನ ಪರಾಕ್ರಮ – ಶಿವಧನಸ್ಸುಭಗ್ನ- ಸೀತಾವಿವಾಹ, ದಶರಥನಿಂದ ರಾಮನಿಗೆ ಪಟ್ಟ ಕಟ್ಟಲು ಏರ್ಪಾಡು ಕೈ ಕೇಯಿ ಕುಟಿಲತೆ, ರಾಮನಿಂದ ಸತ್ಯ ಪಾಲನೆ ಭರತನ ಆದರ್ಶ ಸೋದರ ಪ್ರೇಮ – ಭಾಸನಿಂದ ಕಾಲದಿಂದ ಕಾಲಕ್ಕೆ ಬದಲಾದ ಮೌಲ್ಯಗಳ ಪುನರುತ್ಥಾನ- ಮಾನವೀಯ ಧರ್ಮದ ಮರ್ಮ ತಿಳಿಸುವಿಕೆ.

ಅಧ್ಯಾಯ 4 4.3

ಯಜ್ಞಫಲಂ - ಬಾಲಕಾಂಡದ ಕಥೆ - ದಶರಥನ ಪುತ್ರಕಾಮೇಷ್ಟಿಯಾಗದ ಫಲ - ದುಷ್ಟ ರಾಕ್ಷಸರ ನಿರ್ನಾಮ, ಸೀತಾರಾಮರ ಕಲ್ಯಾಣ

ಅಧ್ಯಾಯ-5

ಬೃಹತ್ಕಥೆಯ ಆದಾರಿತ

ಅಧ್ಯಾಯ-5 5.1

ಸ್ವಪ್ನವಾಸವದತ್ತ :

ಈ ರೂಪಕದಲ್ಲಿ ಯೌಗಂಧ ರಾಯಣ ಹೂಡಿದ ತಂತ್ರ ಅವನ ಸ್ವಾಮಿನಿಷ್ಠೆ. ಪದ್ಮಾವತಿ ಧರ್ಮಪರಾಯಣೆ-ಸಹನಾಮೂರ್ತಿ-ಗುರುಹಿರಿಯರಿಗೆ ಗೌರವ, ವಾಸವದತ್ತೆಯ ನಿಷ್ಕಲ್ಮಶ ಪ್ರೇಮ- ತ್ಯಾಗಮಯಿ- ಸ್ನೇಹ ಸಂಬಂಧಗಳ ಆದರ್ಶ – ಉದಯನ ಧೀರ, ಲಲಿತ ಶೃಂಗಾರ ನಾಯಕ.

ಅಧ್ಯಾಯ-5 5.2

ಪ್ರತಿಜ್ಞಾಯೌಗಂಧರಾಯಣ:-

ಉದಯನನ ಕಥೆ, ಪ್ರಾಧಾನ್ಯತೆ ಮಂತ್ರಿ ಯೌಗಂಧ ರಾಯಣನಿಗೆ, ಅವನು ಚಾಣಕ್ಯನಷ್ಟೆ- ತಂತ್ರ-ಕುಶಲತೆ ಹೊಂದಿದ್ದ. ದೊರೆಯನ್ನು ಬಿಡಿಸಲು ಪ್ರತಿಜ್ಞೆ, ಅವನು (ಉದಯನ) ಮಹಾಸೇನನಿಗೆ ಸೆರೆ. **असिदोषेण गृहीत न पुरुष दोषेण** ಎಂದಿದೆ. ಅವನ ಪರಮ ಸಾತ್ವಿಕತೆ, ಸ್ವಾಮಿ ನಿಷ್ಠೆ, ದಯೆ ಇತ್ಯಾದಿ.

ಅಧ್ಯಾಯ – 6 ಕಥಾ ಸಾಹಿತ್ಯ ಆಧಾರ :–

ಅಧ್ಯಾಯ – 6 6.1

ಚಾರುದತ್ತ ಅಥವಾ ದರಿದ್ರ ಚಾರುದತ್ತ :–

ಸಾಮಾನ್ಯ ಸಾಮಾಜಿಕ ವೃತ್ತಾಂತ ದಾನವೀರ ಒಬ್ಬ ಬಡವ ಆದರೆ ಒಬ್ಬ ಗುಣ ಶಾಲಿಯ ಪ್ರಣಯಕಥೆ. ನಾಯಕಿಯೇನಾಯಕನನ್ನು ಹುಡುಕುವಕಥೆ.

ಅಧ್ಯಾಯ – 6 6.2

ಅವಿಮಾರಕ - ಭಾಸನ ರೂಪಕ - ಒಂದು ಪ್ರಕರಣ - ಅವಿಮಾರಕ -

ಧೀರೋದಾತ್ತ ನಾಯಕ, ಅಸುರ ಸಂಹಾರ, ಅವಿಮಾರಕನೆಂದು ಪ್ರಸಿದ್ಧ

ಗುಣ, ಸಾಹಸ, ಶೌರ್ಯ, ಪರಾಕ್ರಮ ಮೌಲ್ಯಗಳು

ಅಧ್ಯಾಯ – 7

ಭಾಗವತ ಆಧಾರ :–

ಬಾಲ ಚರಿತಮ್ – ಶ್ರೀ ಕೃಷ್ಣನ ಕಥೆ, ಬಾಲ್ಯ ಲೀಲೆಗಳ ಪರಿಚಯ, ನಾಯಕ ಶ್ರೀ ಕೃಷ್ಣ– ಸಾಕ್ಷಾತ್ ಪರಬ್ರಹ್ಮ ಭೂ ಭಾರಹರಣ– ಗೋ–ಬ್ರಾಹ್ಮಣರ ರಕ್ಷಣೆ ದುಷ್ಟ ಶಿಕ್ಷೆ– ಶಿಷ್ಟ ರಕ್ಷಣೆಗಾಗಿ ಕೃಷ್ಣನ ಜನನ ಧೀರೋದತ್ತ ಸಕಲ ಗುಣ ಸಂಪನ್ನ–ದುರ್ಜನರ ಸೇವೆ ನಿಷ್ಫಲ.

ಅಧ್ಯಾಯ – 8

ಉಪಸಂಹಾರ :–

ಭಾಸನು ಶ್ರೇಷ್ಠ ನಾಟಕಕಾರ ಎಂಬುದರಲ್ಲಿ ಎರಡು ಮಾತಿಲ್ಲ. ಕಾಳಿದಾಸ, ಬಾಣರು ಅವನನ್ನು ಪ್ರಶಂಶಿಸಿದ್ದಾರೆ. ಬಾಣನು ತನ್ನ ಹರ್ಷ ಚರಿತದ ಮಂಗಳ ಶ್ಲೋಕಗಳಲ್ಲಿ

[1] **सूत्रधारकृतारम्भैः नाटकैर्बहु भूमिकैः ।**

सपताकैर्यशोलेभे भासोदेवकुलैरिव ॥

ಎಂದು ಭಾಸನನ್ನು ಹಾಡಿ ಹೊಗಳಿದ್ದಾನೆ. ಮಹಾಕವಿಗಳೆಲ್ಲಾ ಭಾಸನನ್ನು ಗೌರವಾದರಗಳಿಂದ ಸ್ಮರಿಸಿದ್ದಾರೆ ಭಾಸನು ರಾಮಾಯಣ, ಮಹಾಭಾರತ, ಭಾಗವತ, ಬೃಹತ್ಕಥಾ ಇವುಗಳ ಆಧಾರದ ಮೇಲೆ ನಾಟಕಗಳನ್ನು ರಚಿಸಿದ್ದಾನೆ. ಭಾಸನನ್ನು ಆಗಲೇ ವಿಮರ್ಶಕರು, 'ಮುನಿ' ಎಂದು ಕರೆದು ಅವನನ್ನು ವಾಲ್ಮೀಕಿ ವ್ಯಾಸರ ಪಂಕ್ತಿಗೆ ಸೇರಿಸಿ ಗೌರವಿಸಿದ್ದಾರೆ.

ದರ್ಶನದಲ್ಲಿ ನಂಬಿಕೆಯಿಟ್ಟು ಭಕ್ತಿ ಪಂಥಕ್ಕೆ ಸೇರಿದ ವೈಷ್ಣವ ವರ್ಣಾಶ್ರಮ ಧರ್ಮದಲ್ಲಿ ನಿಷ್ಠಾವಂತ ಯಜ್ಞಯಾಗಾದಿಗಳಲ್ಲಿ ಶ್ರದ್ಧಾಸಕ್ತಿಗಳುಳ್ಳವನು. ದಾನದ ಹಿರಿಮೆಗಳಿಗೆ ಮನಸೋತವನು ಸತ್ಯನ್ಯಾಯಗಳಲ್ಲಿ ಅಚಲವಾದ ನಂಬಿಕೆಯುಳ್ಳವನು ಯಾವುದೋ ರಾಜನ ಆಸ್ಥಾನದಲ್ಲಿ ಸುಖ ಜೀವನ ಸಾಗಿಸಿದವನು ಎಂದು ಹೇಳಬಹುದು.

ಭಾಸನ ಸಹೃದಯತ್ವವು ಶ್ಲಾಘನೀಯ, ಮರಣೋನ್ಮುಖನಾದ ದುರ್ಯೋಧನನ ಊರು ಭಂಗಮ್ ರೂಪಕದಲ್ಲಿ ಬಲರಾಮನನ್ನೂ ಅಶ್ವತ್ಥಾಮನನ್ನು ಸಾಂತ್ವನಗೊಳಿಸಿದ ಬಗೆಯೂ, ತನ್ನ ಪತ್ನಿಯರೊಂದಿಗೆ, ತನ್ನ ತಂದೆ ತಾಯಿಗಳು ಹಾಗೂ ಸುತನೊಂದಿಗೆ ವೀರನಾಗಿ, ಕರುಣಾರ್ಧವಾಗಿ ಆಡಿರುವ ಮಾತುಗಳು ಇವನ ಘನತೆಯನ್ನು, ಉದಾರತೆಯನ್ನು ಮರೆಸಿದೆ. **अहो खलुवैरम् पश्चात्तापः संवृत्तः ।**

1) ಎಂದು ಬಲದೇವನಾಡುವ ಮಾತುಗಳು ಜಗತ್ತಿನ ಅನುಕಂಪವನ್ನೇ ಸೂಚಿಸುತ್ತದೆ. ಭಾಸನು ಮಾನವೀಯತೆಯನ್ನು ಮೆರೆಸಿದ್ದಾನೆ.

ಭಾಸನು ತನ್ನ ನಾಟಕಗಳಲ್ಲಿ ಕೆಲವು ಪಾತ್ರಗಳ ಮೂಲಕ ಮಾನವೀಯತೆಯನ್ನು ಎತ್ತಿ ಹಿಡಿದಿದ್ದಾನೆ. ವಾಲಿ.ಕರ್ಣ ಮುಖ್ಯವಾಗಿ ದುರ್ಯೋಧನ ಮತ್ತು ಕೈಕೇಯಿ ಎಲ್ಲರೂ ಅವನ ಸಾನುಕ್ರೋಶತ್ವದಲ್ಲಿ ಮಿಂದು ಮಿನುಗಿದ್ದಾರೆ. ಅದರಲ್ಲೂ ಭಾಸನಿಗೆ ಸ್ತ್ರೀ ಪಾತ್ರಗಳನ್ನು ಕಂಡರೆ ಅಭಿಮಾನ, ತುಂಬುಗೌರವ, ಹೀಗೆ ಭಾಸನು ಕರುಣಾಳು, ಗುಣಪಕ್ಷಪಾತಿ, ದೋಷವನ್ನು ಮರೆಯುತ್ತಾನೆಂದಲ್ಲ ಅದರೆ ಮರೆಸುತ್ತಾನೆ.

2ಭಾಸನ ಅಪ್ರತಿಮ ಕೃತಿ 'ಪ್ರತಿಮಾನಾಟಕ' ಈ ನಾಟಕದ ಮೂಲ ವಸ್ತುವಿಗೆ ಆಕರ– ವಾಲ್ಮೀಕಿ ರಾಮಾಯಣ ಭಾಸನು ವಾಲ್ಮೀಕಿ ರಾಮಾಯಣದ ಕಥೆಯನ್ನು ಇದ್ದಂತೆಯೇ ತನ್ನ ನಾಟಕದಲ್ಲ ಬಳಸಿಕೊಂಡಿಲ್ಲ ಪ್ರತಿಮಾ ನಾಟಕ ಕಥೆಗೂ, ವಾಲ್ಮೀಕಿ ರಾಮಾಯಣದ ಕಥೆಗೂ ವ್ಯತ್ಯಾಸವಿದೆ. ಭಾಸನ ಪ್ರತಿಮಾ ನಾಟಕವು ಆಧುನಿಕರು ಕೂಡ ಮೆಚ್ಚುವಷ್ಟುರ ರಮಣೀಯವಾಗಿದೆ. ಕೈಕೇಯಿ, ಶ್ರೀರಾಮ, ಭರತ, ಲಕ್ಷಣ, ಸೀತೆ, ಈ ಎಲ್ಲರ ಪಾತ್ರಗಳೂ ರಾಮಾಯಣಕ್ಕಿಂತ ಉಜ್ವಲತರವಾಗಿ, ಕಳಂಕ ರಹಿತವಾಗಿ ಶೋಭಿಸುವಂತೆ ಭಾಸನು ತನ್ನ ನೂತನ ಕಥಾ ಸೃಷ್ಟಿ ಮಾಡಿದ್ದಾನೆ. ಒಂದು ಉದಾಹರಣೆ ನೋಡುವುದಾದರೆ. ಪ್ರತಿಮಾ ನಾಟಕದಲ್ಲಿ ಭರತನಿಗೆ ಕೈಕೇಯಿ ತಿಳಿಸುತ್ತಾಳೆ ದಶರಥ ಮಹಾರಾಜನಿಗೆ ಶಾಪವಿತ್ತೆಂದು – ಮಗನೇ ಈ ಕಾರಣದಿಂದ ನನ್ನನ್ನೇ ಅಪರಾಧಕ್ಕೆ ಗುರಿ ಮಾಡಿಕೊಂಡಾದರೂ ಪ್ರಿಯಪುತ್ರನಾದ

ರಾಮನನ್ನು ಕಾಡಿಗೆ ಕಳುಹಿಸಿಕೊಟ್ಟ ರಾಜ್ಯದ ಮೇಲಿನ ಲೋಭದಿಂದಲ್ಲ, ಹೇಗೂ ಪರಿಹರಿಸಲಶಕ್ಯವಾಗಿದ್ದ ಮಹರ್ಷಿಯ ಶಾಪ ಮಗನ ವಿಯೋಗವಿಲ್ಲದೆಯೇ ನಡೆದೀತೆ ? ಎಂದು ಹೇಳಿದಳು ಇದರಿಂದ ಕೈಕೇಯಿ ಕೆಟ್ಟವಳಲ್ಲವೆಂದು ಭಾಸನು ಪ್ರತಿಪಾದಿಸಿ ಋಷಿಯ ಶಾಪವೇ ಕಾರಣವೆಂದಿದ್ದಾನೆ.

ಇಂದಿನ ಜೀವನಕ್ಕೆ ಬೇಕಾದ ಅಸಂಖ್ಯಾತ ಮಾನವೀಯ ಮೌಲ್ಯಗಳು ಬಾಸಕವಿಯ ರೂಪಕಗಳಲ್ಲಿ ಹಾಸು ಹೊಕ್ಕಾಗಿವೆ.

ಅವನ ನಾಟಕಗಳಲ್ಲಿ ಬರುವ ಪಾತ್ರಧಾರಿಗಳಲ್ಲಿ ಮಾನವೀಯತೆಯ ಗುಣ ವಿಶೇಷಗಳನ್ನು ನೋಡಬಹುದು. ಅದಕ್ಕಾಗಿಯೇ ಭಾಸನ ರೂಪಕಗಳಲ್ಲಿ ಬರುವ ಪಾತ್ರಧಾರಿಗಳ ಗುಣಗಳ ಪರಾಮರ್ಶೆಗೆ ನಾನು ತೊಡಗುವ ಸಂಕಲ್ಪ ಮಾಡಿರುತ್ತೇನೆ. ಮಾನವೀಯತೆಯನ್ನು ತನ್ನ ಸಂಭಾಷಣೆಗಳ ಮೂಲಕ ಪ್ರತಿ ಬಿಂಬಿಸುವ ಅನೇಕ ಪಾತ್ರಗಳನ್ನು ನಾವು ಭಾಸನ ಬಹುತೇಕ ನಾಟಕಗಳಲ್ಲಿ ಕಾಣಬಹುದಾಗಿದೆ.

ಇಂದಿನ ಯುಗದಲ್ಲಿ ಮಾನವ ಸಮಾಜವು ಅನಿಶ್ಚಿತತೆ ಮತ್ತು ಅಸ್ಥಿರತೆಯಿಂದ ಕೂಡಿ ನಲುಗುತ್ತಿದೆ. ಎಲ್ಲೆಲ್ಲಿಯೂ ಅಶಾಂತಿ ತಾಂಡವಾಡುತ್ತಿದೆ. ಇಂತಹರ ಪರಿಸರದಲ್ಲಿರುವ ಸಮಾಜದಲ್ಲಿ ಭಾಸನು ತನ್ನ ನಾಟಕಗಳ ಮೂಲಕ ಆಗಿನ ಕಾಲದಲ್ಲಿಯೇ ಹೇಳಲೆತ್ನಿಸಿರುವ ಜೀವನದ ಮೌಲ್ಯಗಳು ಮಾನವೀಯತೆಯಿಂದ ಕೂಡಿ ಇಂದಿಗೂ ಸಮಾಜಕ್ಕೆ ಅಪ್ಯಾಯಮಾನವಾಗಿದೆ.

ಪ್ರಮುಖ ಆಧಾರ ಗ್ರಂಥಗಳು

1 ಭಾಸನ ನಾಟಕಗಳು– ಡಾ.ಕೆ.ಕೃಷ್ಣಮೂರ್ತಿ, ಸಂಶೋಧನೆ, ಪ್ರತಿಷ್ಠಾನ, ಮೈಸೂರು. (2014)

2 ಭಾಸನಾಟಕ ಚಕ್ರಮ್ –ಭಾಗ–1, ಚೌಖಾಂಬ ಅಕಾಡೆಮಿ, ವಾರಣಾಸಿ. (1979)

3 ಭಾಸನಾಟಕ ಚಕ್ರಮ್ – ಭಾಗ –2, ಚೌಖಾಂಬ ಅಕಾಡೆಮಿ, ವಾರಣಾಸಿ. (1979)

4 ಭಗವದ್ಗೀತಾ ಯಥಾ ರೂಪ (ಕನ್ನಡ) – ಇಸ್ಕಾನ್ ಪ್ರಕಟಣೆ, ಬೆಂಗಳೂರು.

5 ವಚನಭಾರತ – ಪ್ರೋ.ಎ.ಆರ್. ಕೃಷ್ಣಶಾಸ್ತ್ರೀ, ಕನ್ನಡ ಪುಸ್ತಕ ಪ್ರಾಧಿಕಾರ.

6 ಧನಂಜಯನ ದಶರೂಪಕಗಳು – ಮೂಲ ಮತ್ತು ಕನ್ನಡ ಅನುವಾದ)
ಲೇ.ಕೆ.ವಿ.ಸುಬ್ಬಣ್ಣ ಪ್ರ– ಅಕ್ಷರ ಪ್ರಕಾಶನ. ಹೆಗ್ಗೋಡು (ಸಾಗರ)

7 ಭಗವದ್ಗೀತಾ – ಗೋರಖ್‌ಪುರ ಪ್ರಕಟಣೆ

8 ವೇದಗಳು – ರಾಮಕೃಷ್ಣ ಮಠ ಪ್ರಕಟಣೆ, ಬೆಂಗಳೂರು.

9. ವೈದಿಕ ಸಾಹಿತ್ಯ ಚರಿತ್ರೆ - ಡಾ. ಎನ್.ಎಸ್. ಅನಂತರಂಗಾಚಾರ್ - ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು (2013)

10 ಕನ್ನಡ ಭಾಷಾಂತರ ಉಪನಿಷತ್ತುಗಳು – ಶ್ರೀರಾಮಕೃಷ್ಣಾಶ್ರಮ, ಯಾದವಗಿರಿ, ಮೈಸೂರು ಪ್ರಕಟಣೆ.

ಉಪ ಪ್ರಮುಖ ಆಧಾರ ಗ್ರಂಥಗಳು

1 ಭಾರತೀಯ ಕಾವ್ಯವಿಮಾಂಸೆ – ಪ್ರೊ. ತೀ.ನಂ.ಶ್ರೀಕಂಠಯ್ಯ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ (2013).

2 ಭಾರತೀಯ ಸಂಸ್ಕೃತಿಯಲ್ಲಿ ಆದರ್ಶ ಮೌಲ್ಯಗಳು ಡಾ। ಎಸ್. ರಂಗನಾಥ. (2012)

3 ಭಾರತೀಯ ಸ್ಮೃತಿಗಳು –ವಿದ್ವಾನ್ ರಘುಸುತ– ಹೇಮಂತ ಸಾಹಿತ್ಯ ಬೆಂಗಳೂರು. (2008)

4 ಲೌಕಿಕ ಸಂಸ್ಕೃತ – ಡಾ॥ ಬಿ.ಎಸ್. ಮಹದೇವಯ್ಯ , ಪ್ರಕಟಣೆ, ಕುವೆಂಪು, ವಿ.ವಿ.ನಿಲಯ, ಶಿವಮೊಗ್ಗ.

5 ಪರಾಶರಸ್ಮೃತಿ– ಚ.ಈಶ್ವರಶಾಸ್ತ್ರೀ–ಸಮಾಜ ಪುಸ್ತಕಾಲಯ, ಧಾರವಾಡ. (2015)

6 ಸಂಸ್ಕೃತ ಕಾವ್ಯ–ಡಾ॥ ಕೆ.ಕೃಷ್ಣಮೂರ್ತಿ, ವಿದ್ಯುತ್ ಪ್ರಕಾಶನ, ಮೈಸೂರು. (2003)

7 ಸಂಸ್ಕೃತ ಸಾಹಿತ್ಯ ಇತಿಹಾಸ ಡಾ॥ ಕೆ. ಗಣಪತಿಭಟ್ಟ, ಅಖೀಲಾ ಏಜೆನ್ಸಿಸ್, ಮೈಸೂರು. (1999)

8 ಯಾಜ್ಞವಲ್ಕ್ಯಸ್ಮೃತಿ – ಅ.ನಾಗೇಶ್ –ಸಮಾಜ ಪುಸ್ತಕಾಲಯ, ಧಾರವಾಡ. (2010)

9 ಸಂಸ್ಕೃತ ಸಾಹಿತ್ಯ –ಶ್ರೀ.ಕೆ.ಎನ್. ಗಂಗಾನಾಯಕ್, ಮೈಸೂರು ವಿ.ವಿ.ನಿಲಯ ಪ್ರಕಟಣೆ. (2011)

10 ಸಂಸ್ಕೃತ ಕನ್ನಡ ಅರ್ಥಕೋಶ – ಲೇ. ಚಕ್ರವರ್ತಿ.

11 ವಿವೇಕಚೂಡಾಮಣಿ ಭಾಗ–1, ಶ್ರೀ ಶಂಕರಾಚಾರ್ಯರು, ಸ್ವಾಮಿ, ಚಿನ್ಮಾಯಾನಂದ,
ಸೆಂಟ್ರಲ್ ಚಿನ್ಮಯ ಮಿಷನ್ ಟ್ರಸ್ಟ್, ಬೆಂಗಳೂರು.

12 ಸಂಶೋಧನೆ ಸ್ವರೂಪ– ಡಾ॥ ಬಿ.ವ್ಹಿ.ಶಿರೂರ ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ. (2015)

13. ಭಾಸನ ಪಂಚ ಕಿರುನಾಟಕಗಳು - ಡಾ. ಕೆ. ಕೃಷ್ಣಮೂರ್ತಿ - ಸಂಶೋಧನ ಪ್ರತಿಷ್ಠಾನ, ಮೈಸೂರು (2014)

14. ಸಂಸ್ಕೃತ ನಾಟಕ - ಎ.ಆರ್. ಕೃಷ್ಣಶಾಸ್ತ್ರೀ - ಹೇಮಂತ ಸಾಹಿತ್ಯ ಬೆಂಗಳೂರು - (2012)

15. ವಚನ ಧರ್ಮ ಸಾರ - ಎಂ.ಆರ್. ಶ್ರೀನಿವಾಸಮೂರ್ತಿ - ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ. (2014)

16. ದಶೋಪನಿಷತ್ತುಗಳ ಸಾರ - ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ (2002)

17. ಜೀವನ ಮೌಲ್ಯಗಳು - ಭಾಗ - 1, 2, 3 ಮತ್ತು 4, ಪ್ರ.ಗ. ಸಹಸ್ರಬುದ್ಧೆ, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು.

28. ಹತ್ತು ಸಂಸ್ಕತ ನಾಟಕಗಳು - ಸಿ.ಪಿ.ಕೆ. ಶ್ರೀ ಲಲಿತಾ ಬುಕ್ ಬ್ಯೂರೋ, ಮೈಸೂರು (2009)

29. ಭಾಸನ ನಲ್ನುಡಿ - ಪ್ರೊ. ವಿಷ್ಣು ಜೋಷಿ - ಮೈಸೂರು (2009) ಸಾಹಿತ್ಯ ಪ್ರಕಾಶನ ಹುಬ್ಬಳ್ಳಿ - 2016

DR. NAGARAJA B.
Prof. & Guide in Sanskrit
S.D.C.P.G.S. & R.S.
Mangalore University
Kateel - 547148, D.K. Dist.

CHAIRMAN
B.O.S. in Sankrit

Mr. Kumaraswamy B.H.
Research Scholar in Sankrit
S.D.C.P.G.S. & R.S.
Mangalore University
Kateel - 547148, D.K. Dist.